ಇನ್ನೂ ಪರ್ಮನೆಂಟ್ ಆಗಿಲ್ಲ. ನಿಮ್ಮಲ್ಲಿ ಸುಳ್ಳು ಹೇಳುವುದು ಯಾಕೆ? ನಮ್ಮವರೇ ಆದರೂ ಮ್ಯಾನೇಜ್ಮೆಂಟಿಗೆ ಎಂಟು ಲಕ್ಷ ಕೊಡಬೇಕಾಯಿತು. ಇದ್ದ ಬದ್ದದನ್ನೆಲ್ಲಾ ಬಳಿದೇ ಕೊಟ್ಟದ್ದು." "ಓ. ನಿಮ್ಮ ಮಗನೂ ಮಾಸ್ಟರಾ ಹಾಗಾದರೆ?" ಅಕ್ಕು ಪೂಜಾರ್ತಿಯ ಪ್ರಶ್ನೆಗೆ ಮಾಸ್ಟರ ಮುಖ ಸಪ್ಪಗಾಯಿತು. "ಏನು ಹೇಳುವುದು ಪೂಜಾರ್ತಿಯರೇ? ನಮ್ಮ ಈ ಕೇರಳ ಸರಕಾರ ಒಂದನೇ ಕ್ಲಾಸಿಗೆ ಎಂಟು ಮಕ್ಕಳಿಗಿಂತ ಕಡಿಮೆ ಇರುವ ಕನ್ನಡ ಶಾಲೆಗಳನ್ನು ಮುಚ್ಚುವ ತೀರ್ಮಾನ ತಂದದ್ದು ನಿಮಗೂ ಗೊತ್ತಿರಬಹುದು. ಕಳೆದ ಕೆಲವು ವರ್ಷಗಳಿಂದ ಈ ಇಂಗ್ಲಿಷು ಶಾಲೆಗಳಿಂದಾಗಿ ಎಲ್ಲಾ ಶಾಲೆಗಳಲ್ಲೂ ಮಕ್ಕಳು ಕಡಿಮೆಯೇ. ಆ ಲೆಕ್ಕದಲ್ಲಿ ನಮ್ಮ ಶಾಲೆ ಇಷ್ಟು ವರ್ಷ ಉಳಿದದ್ದೇ ಹೆಚ್ಚು ಅನ್ನಬೇಕು. ಈ ಸಲ ಕೂಡ ಇಡೀ ಊರು ತಿರುಗಿ ಏಳೆಂಟು ಮಕ್ಕಳನ್ನು ಸೆಟ್ಟು ಮಾಡಿದ್ದೆ. ನಿಮ್ಮ ರಮೇಶನಲ್ಲೂ ಹೇಳಿದ್ದೆ. ಅವನು ಒಪ್ಪಿಕೊಂಡಿದ್ದ ಕೂಡ. ಆದರೆ, ಮೊನ್ನೆ ನನ್ನ ಮಗ ಪಂಚಾಯತಲ್ಲಿ ಸಿಕ್ಕಿದಾಗ ಮಕ್ಕಳನ್ನು ಆಂಡ್ರ್ಯೂವಿನ ಹೊಸ ಶಾಲೆಗೇ ಸೇರಿಸುವುದು ಅಂದಿದ್ದಾನೆ. ಈ ಕಡೇ ಹೊತ್ತಲ್ಲಿ ಹಾಗೆ ಹೇಳಿದರೆ ನನ್ನ ಗತಿ ಅಧೋಗತಿ ಅಷ್ಟೇ. ಅದಕ್ಕೇ ನಿಮ್ಮನ್ನು ಕಾಣಲು ಬಂದದ್ದು ನಾನು. ಮನೆಯಲ್ಲಿ ಅವಳ ಕಿಡ್ನಿ ಹಾಳಾಗಿ ಮಲಗಿದಲ್ಲಿ ಆಗಿ ವರ್ಷ ಮೂರಾಯ್ತು. ವಾರಕ್ಕೆ ಎರಡು ಸಲ ಡಯಾಲಿಸಿಸ್. ನನ್ನ ಪೆನ್ಶನ್ ಅದಕ್ಕೇ ಸಾಲುವುದಿಲ್ಲ. ಇನ್ನು ಮಗನ ಕೆಲಸವೂ ಹೋದರೆ" ಮಾಸ್ಟರು ಹೇಳುತ್ತಾ, ಹೇಳುತ್ತಾ ಗದ್ಗದಿತರಾದರು. ಆ ಕಣ್ಣಿನಲ್ಲಿ ನೀರಿನ ಪಸೆ ಕಂಡಾಗ ಅಕ್ಕು ಪೂಜಾರ್ತಿಯ ಕೊರಳ ಸೆರೆಯೂ ಬಿಗಿಯಿತು. 'ಅಲ್ಲ. ಈ ರಮೇಶ ಏನು ತಿಳಿದುಕೊಂಡಿದ್ದಾನೆ? ವಿದ್ಯೆ ಕಲಿಸಿದ ಮಾಸ್ಟರ ಕಣ್ಣಲ್ಲಿ ನೀರು ಹಾಕಿಸಿದರೆ ಇವನ ಮಕ್ಕಳಿಗೆ ಒಳಿತಾದೀತಾ? ಅಷ್ಟಕ್ಕೂ ಇವನು ಇವತ್ತು ಈ ಮಟ್ಟಕ್ಕೆ ಮುಟ್ಟಿದ್ದು ಇದೇ ಕನ್ನಡ ಶಾಲೆಯಲ್ಲಿ ಕಲಿತೇ ಅಲ್ಲವಾ? ಆ ಸೋಜರ ಆಂಡ್ರ್ಯೂ ಹೊಸಾ ಶಾಲೆ ಕಟ್ಟಿದ್ದೂ ಇದೇ ಶಾಲೆಯಿಂದ ಅಕ್ಷರ ಕಲಿತಲ್ಲವಾ? ರಮೇಶ ಇವತ್ತು ಮನೆಗೆ ಬರಲಿ. ಕೊಟ್ಟ ಮಾತನ್ನು ತಪ್ಪುವುದನ್ನು ಯಾವ ಶಾಲೆಯಿಂದ ಕಲಿತದ್ದು? ಎಂದು ಕೇಳಿಯೇ ಸಿದ್ಧ' ಮನಸ್ಸಿನಲ್ಲೇ ತೀರ್ಮಾನಿಸಿದವಳ ಮುಖದ ಸ್ನಾಯುಗಳು ಬಿಗಿಯಾದವು. "ನೀವು ಚಿಂತೆ ಮಾಡಬೇಡಿ ಮಾಸ್ಟರೆ. ನನ್ನ ಪುಳ್ಳಿಯಕ್ಕಳು ನಿಮ್ಮ ಶಾಲೆಯಲ್ಲೇ ಕಲಿಯುವುದು. ಅದರಲ್ಲಿ ನಿಮಗೆ ಸಂಶಯ ಬೇಡ. ಹಾಗೆ ನಮ್ಮ ಸುಮನ ಮಗನಿಗೂ ಐದು ದಾಟಿರಬೇಕು. ಅವಳಲ್ಲೂ ಹೇಳ್ತೇನೆ. ನೀವು ಸಮಾಧಾನದಲ್ಲಿ ಹೋಗಿ." ಮಾಸ್ಟರ ಸುಕ್ಕುಗಟ್ಟಿದ ಕೆನ್ನೆಯ ಮೇಲೆ ಕಣ್ಣ ಹನಿಯೊಂದು ಜಾರಿತು. "ನನ್ನನ್ನು ಉಳಿಸಿದಿರಿ ಪೂಜಾರ್ತಿಯವರೇ" ಎಂದವರೇ ಎರಡೂ ಕೈಜೋಡಿಸಿ ಮೇಲೆತ್ತಿ ನಮಸ್ಕರಿಸಿದರು. ಅಕ್ಕು ಪೂಜಾರ್ತಿಯ ಕಣ್ಣಲ್ಲೂ ಹನಿ ಜಿನುಗಿತು. "ನೀವು ನನಗೆ ನಮಸ್ಕಾರ ಮಾಡಬಾರದು ಮಾಸ್ಟರೆ. ನನ್ನನ್ನು ಉಳಿಸಿದವರು ನೀವು" ಎಂದವಳೇ ಮಾಸ್ಟರು ಅವಾಕ್ಕಾಗಿ ನೋಡುತ್ತಿದ್ದಂತೆ ಆ ಪಾದಗಳಿಗೆ ಮಂಡಿಯೂರಿ ನಮಸ್ಕರಿಸಿದಳು. ಈಸಿಚೇರಿನಲ್ಲಿ ಒರಗಿದ್ದ ಅಂತಕ್ಕ ಮನತುಂಬಿ ನಕ್ಕಳು.

**ಸ್ನೇಹಲತಾ ದಿವಾಕರ್**

ಕಾಸರಗೋಡಿನ ಕುಂಬಳೆಯಲ್ಲಿ ನೆಲೆಸಿರುವ ಸ್ನೇಹಲತಾ ಬದುಕಿನ ಸೂಕ್ಷ್ಮ ವಿವರಗಳಲ್ಲಿ ಕತೆಗಳನ್ನು ಕಟ್ಟುತ್ತಾರೆ. ಅವರ ಕಥಾಸಂಕಲನ 'ಮಗ್ಗ'. ಅವರ ಕತೆಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ, ಆಕಾಶವಾಣಿಯಲ್ಲೂ ಪ್ರಸಾರವಾಗಿವೆ.